**ವ್ಯಾಖ್ಯಾನ**

# ಧರ್ಮವೇ ಜಯವೆಂಬ ದಿವ್ಯಮಂತ್ರ

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 15.

**ಕೀರ್ತನೆಯ ಚಿಂತನೆ:**

ಶ್ರೀಪುರಂದರದಾಸರು ಅವತರಿಸಿ ಬಂದದ್ದೇ ಭಗವಂತನ ಪಾರಮ್ಯವನ್ನು ಜೀವನದ ಸಾರ್ಥಕ್ಯವನ್ನು ತಿಳಿಸಲೋಸುಗ, ಮನುಷ್ಯ ಹೇಗೆ ಬದುಕಬೇಕೆಂಬುದರ ಮರ್ಮವನ್ನು ಕಂಡು, ಅನುಭವಿಸಿ ಹೇಳಿದರು. ಹುಟ್ಟಿದವ ಹೇಗೋ ಬದುಕಿ ಹಾಗೆ ಸಾಯುವುದು ಸರಿಯಲ್ಲ, ಹೇಗೆ ಜೀವಿಸಿದ ಎಂಬುದು ಮುಖ್ಯವೆಂದರು. ಕಾರಣ 'ಮಾನವ ಜನ್ಮ ದೊಡ್ಡದು' ಅಷ್ಟೇ ಅಲ್ಲ 'ಇದ ಹಾಳು ಮಾಡಲಿ ಬೇಡಿ ಹುಚ್ಚಪ್ಪಗಳಿರಾ' ಎಂದು ಹೇಳಿ ಎಚ್ಚರಿಸಿದರು. ಜೀವನದ ಮೌಲ್ಯಗಳನ್ನು ಎತ್ತಿ ತೋರಿ ಅವರನ್ನೂ ಎತ್ತರಕ್ಕೆ ಕೊಂಡೊಯ್ಯಲು ಪ್ರಯತ್ನಿಸಿದರು. ಅನೇಕ ಜೀವನ ಸೂತ್ರಗಳನ್ನು ನಮ್ಮ ಮುಂದಿಟ್ಟರು. ಸಾಧನ ಮಾರ್ಗದಲ್ಲಿರುವ ಸಜ್ಜನನ ಲಕ್ಷಣಗಳನ್ನು ಸಂಗ್ರಹಿಸಿ ದಾಸರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಕೃತಿಯನ್ನಾಗಿಸಿರುವುದನ್ನು ಇಲ್ಲಿ ನೋಡಬಹುದು.

**ಧರ್ಮವೇ ಜಯವೆಂಬ ದಿವ್ಯಮಂತ್ರ** ॥ ಪ ॥

**ಮರ್ಮವನರಿತು ಮಾಡಲಿಬೇಕು ತಂತ್ರ** ॥ ಅ.ಪ ॥

ಮನುಷ್ಯನನ್ನು ಯಾವದು ಅವನತಿಯಿಂದ ಎತ್ತಿ ಹಿಡಿಯಬಲ್ಲದ್ದೂ ಅದು ಧರ್ಮ. ಅಂದರೆ ಮಾನವನ ಅಭ್ಯುದಯಕ್ಕೆ ಕಾರಣವಾದದ್ದು. ಅದು ವಿಶ್ವಧರ್ಮ, ಮಾನವ ಧರ್ಮ, ಸಮಾಜ ಧರ್ಮ, ವರ್ಣ ಧರ್ಮ, ಆಶ್ರಮ ಧರ್ಮ, ಜಾತಿ ಧರ್ಮ, ನ್ಯಾಯ–ನೀತಿ ಹೀಗೆ ಏನೇ ಆಗಿರಬಹುದು. ವೇದಗಳಿಗೆ ಹಾಗೂ ಸನಾತನ ಧರ್ಮಕ್ಕೆ ಅನುಸಾರಿಯಾದದ್ದಾಗಿ ಅಪಕಾರಕವಲ್ಲದ್ದು ಧರ್ಮ. ಮೂಲತಃ ಭಗವಂತನನ್ನು ಧರ್ಮನೆಂದು ಕರೆದಿದೆ. ವ್ಯಕ್ತಿಯ ಕೌಟುಂಬಿಕ ಹಾಗೂ ಸಮಾಜದಲ್ಲಿ ವಿಶೇಷವಾಗಿ ಈ ಧರ್ಮಪಾಲನೆ ಅತ್ಯಾವಶ್ಯಕವಾದದ್ದು. ಆದರೆ ಈ ಧರ್ಮದ ಬಗ್ಗೆ ಪಾಲನೆಯಲ್ಲಿ

ಗೊಂದಲಮಯವನ್ನಾಗಿಸಿಕೊಂಡು ಒದ್ದಾಡುವ ಪ್ರಸಂಗಗಳೇ ಹೆಚ್ಚು ಇವುಗಳಿಗೆಲ್ಲಾ ಸೂಕ್ತವಾದ ಉತ್ತರವನ್ನು ಶ್ರೀಪುರಂದರದಾಸರು ನೀಡಿ ಸುಖ ಬಾಳಿಗೆ ಬೇಕಾದ ಉಪಾಯವನ್ನು ತಿಳಿಸಿರುವರು. ಸೂತ್ರಪ್ರಾಯವಾದ, ವೇದತುಲ್ಯವಾದ ಮಂತ್ರವನ್ನೇ ಉಪದೇಶಿಸಿದರು. ಇದುವೇ ಮೇಲಿನ ಮಂತ್ರ.

ಮನುಷ್ಯ ಸದಾ ಮನದಲ್ಲಿ ಧರ್ಮವೇ ಜಯ, ಧರ್ಮಕ್ಕೆ ಜಯ, ಧರ್ಮಿಷ್ಠರಿಗೆ ಜಯ, ಧರ್ಮಾತ್ಮರಿಗೆ ಜಯವೆಂಬ ಮಂತ್ರವನ್ನು ಜಪಿಸುತ್ತಿರಬೇಕು. ಇದಕ್ಕೆ ವಿರುದ್ಧವಾದ ಅಧರ್ಮದ ಚಿಂತನೆ ಎಂದಿಗೂ ತರವಲ್ಲ. ಈ ಮಂತ್ರವನ್ನು ಮನದಲ್ಲಿರಿಸಿ ಜೀವನದಲ್ಲಿ ಪ್ರಸಂಗಕ್ಕೆ ಅಥವಾ ಆಯಾ ಸಂದರ್ಭಕ್ಕೆ ಅನುಗುಣವಾಗಿ ಮರ್ಮವನ್ನರಿತು ಅಂತರಾರ್ಥವನ್ನು – ರಹಸ್ಯ – ಹೃದಯವನ್ನು ಅರಿತು ಮಾಡಲಿಬೇಕು ತಂತ್ರ. ಇಲ್ಲಿ ತಂತ್ರವೆಂದರೆ ಉಪಾಯ. ಅನುಸರಿಸುವ ಬುದ್ಧಿವಂತಿಕೆಯ ಪ್ರಯೋಗದ ವಿಧಾನವೂ ತಂತ್ರವೆನಿಸಿದೆ. ಒಂದರ್ಥದಲ್ಲಿ ಕಾಲಿಕ–ದೇಶಿಕ ಚತುರೋಪಾಯ. ಇದು ಜೀವನದಲ್ಲಿ ಸುಖ ಬಾಳುವೆ ನಡೆಸಲು, ನಿರ್ವಿಘ್ನವಾಗಿ ಧರ್ಮಾಚರಣೆಯನ್ನು ಸಾಗಿಸಲು, ಕಾಮಕ್ರೋಧಾದಿಗಳ ನಿಗ್ರಹಕ್ಕೆ, ಎಲ್ಲಕ್ಕೂ ಮಿಗಿಲಾಗಿ ತತ್ತ್ವಜ್ಞಾನ ಸಂಪಾದಿಸಲು ಬೇಕಾದ ಧರ್ಮವಾಗಿದೆ. ದಾಸರು ಇಲ್ಲಿ ಅದ್ಭುತವಾದ ಪರಿಕಲ್ಪನೆಯನ್ನು ವಿಶ್ಲೇಷಿಸಿ ನೀಡಿರುವುದು ಸಾರ್ವಕಾಲಿಕ ಸತ್ಯವಾಗಿದೆ. ಸಾರ್ವಜನಿಕವಾಗಿದೆ. ಜೀವನದಲ್ಲಿ ಎಂತಹ ವಿಷಮ ಪ್ರಸಂಗಗಳು ಒದಗಿದರು, ದ್ವೇಷಿಗಳ–ವಂಚಕರ ನಡುವೆ ಸಿಕ್ಕಿಕೊಂಡಾಗ, ನಮಗೆ ಉಕ್ಕಿಬರುವ ಕಾಮಕ್ರೋಧಾದಿ ವರ್ಗಗಳ ನಿಯಂತ್ರಣಕ್ಕೆ, ವೈರಿಗಳ ಶಮನಕ್ಕೆ, ಹಿತೈಷಿಗಳ ಹಿತನುಡಿಗಳ ಪಾಲನೆಗೆ, ವಿಶೇಷವಾಗಿ ಎಲ್ಲರೊಂದಿಗೆ ಸ್ಪಂದಿಸಲು ದಾಸರು ಕೊಟ್ಟ ಮಂತ್ರವು ನಮ್ಮ ತಲೆಯಲ್ಲಿದ್ದರೆ ಎಂದಿಗೂ ಭಯವಿಲ್ಲ – ನಾಶವಿಲ್ಲ. ಒಟ್ಟಿನಲ್ಲಿ ಧರ್ಮದ ಹಿನ್ನೆಲೆಯಲ್ಲಿ ಸಾಂದರ್ಭಿಕ ಮರ್ಮವನ್ನರಿತು ಮಾಡಬೇಕಾದ ತಂತ್ರವೇ ತಾರಕ, ಜೀವನವನ್ನು ಪಾವನವನ್ನಾಗಿಸಬಲ್ಲದು.

ಜೀವನದಲ್ಲಿ ಬರುವ ಬರಬಹುದಾದ ಪ್ರಸಂಗಗಳನ್ನು ಸಾಂದರ್ಭಿಕವಾಗಿ ಒದಗುವ ಅನುಸಂಕಟ ಅಥವಾ ಗೊಂದಲಗಳನ್ನು ಒಂದೊಂದಾಗಿ ಉದಾಹರಿಸಿ ಜಾಣ್ಮೆಯಿಂದ – ನಾಜೂಕಾಗಿ ಹೇಗೆ ಪರಿಹರಿಸಿಕೊಳ್ಳಬಹುದೆಂಬ ತಂತ್ರಗಳನ್ನು ದಾಸರು ಸೂಕ್ತ ರೀತಿಯಲ್ಲಿ ನಮ್ಮ ಮುಂದಿಟ್ಟಿರುವುದನ್ನು ನೋಡಬಹುದು. ಇವು ಸುಖಮಯ ಜೀವನ ಸಾಗಿಸಲು ಸುಲಭ ಸೂತ್ರಗಳೂ ಆಗಿವೆ. ಮನೆಯ ಒಳಗೆ – ಹೊರಗೆ ಹೇಗೆ ಸ್ಪಂದಿಸಬೇಕೆಂಬ ಸಂದೇಶವೂ ಇದೆ.

**ವಿಷವಿಕ್ಕಿದವಗೆ ಷಡ್ರಸವನುಣಿಸಲಿಬೇಕು**

**ದ್ವೇಷ ಮಾಡಿದವನ ಪೋಷಿಸಲಿಬೇಕು ।**

**ಪುಸಿ ಮಾಡಿ ಕೆಡಿಸುವನ ಹಾಡಿ ಹರಸಲಿಬೇಕು**

**ಮೋಸ ಮಾಡುವನ ಹೆಸರು ಮಗನಿಗಿಡಬೇಕು** ॥ 1 ॥

ಜಗತ್ತಿನಲ್ಲಿ ಮನುಷ್ಯರಿಗೆ ತಮ್ಮ ಸುತ್ತ ಮುತ್ತಲು ತಮಗೆ ಬೇಡದವರು–ದ್ವೇಷಿಗಳು ಇರಬಹುದು. ಇಂತಹ ವಿಷ ಜಂತುಗಳು ಸಜ್ಜನರ ಸಜ್ಜನಿಕೆಯನ್ನು ವಿರೋಧಿಸಬಹುದು. ಹೀಗಾಗಿ ನಮ್ಮ ಸಾಧನೆಗೆ, ಮಾಡುವ ಲೋಕೋಪಕಾರಕ ಕಾರ್ಯಗಳಿಗೆ ಅಡ್ಡಿ ಮಾಡಬಹುದು.

ಇವುಗಳನ್ನು ಗಮನದಲ್ಲಿರಿಸಿ ದೇವ–ಗುರುಗಳ ಮೇಲೆ ವಿಶ್ವಾಸವಿಟ್ಟು ದಾಸರು ನಿರ್ದೇಶಿಸಿದ ರೀತಿಯಲ್ಲಿ ನಡೆದರೆ ಎಲ್ಲ ಚಿಂತೆಯೂ, ನಿಶ್ಚಿಂತೆಯಾಗುವಲ್ಲಿ ಯಾವ ಸಂಶಯವಿಲ್ಲ. ನಮ್ಮ ನಾಶ ಪಡಿಸಬೇಕೆಂಬ ವಿಷವನ್ನೆ ಹಾಕಿದವನನ್ನು ಆದರಿಸಿ ಕರೆದು ಮೃಷ್ಟಾನ್ನ ಭೋಜನವನ್ನು ಮಾಡಿಸಿರೆಂದರು. ನಮ್ಮನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅಥವಾ ಇತರರ ಮಾತನ್ನು ಕೇಳಿ ದ್ವೇಷ ಮಾಡಿದವನನ್ನೂ ಪೋಷಿಸಿ ಎಂದರು. ಪುಸಿ ಮಾಡಿ ಎಂದರೆ ಸುಳ್ಳು ಹೇಳಿ ಅಥವಾ ವಂಚಿಸಿ, ಮಿಥ್ಯಾವಾದಗಳನ್ನು ಉಪದೇಶಿಸಿತ್ತ ನಮ್ಮನ್ನು ಕೆಡಿಸಿದವನನ್ನು ಹೊಗಳಿ ಒಳಿತಾಗಲೆಂದು ಹರಸಿರೆಂದರು. ಇನ್ನು ಮೋಸ ಮಾಡುವನ ಎಂದರೆ ಕಪಟ–ವಂಚನೆ ಮಾಡುವನ ಹೆಸರನ್ನು ತನ್ನ ಮಗನಿಗಿಟ್ಟು ಕರೆದರೂ ಪರವಾಗಿಲ್ಲವೆಂದರು. ಸರ್ವನಾಮಗಳೂ ಭಗವಂತನದೆಂಬ ಅನುಸಂಧಾನ ಒಂದಿದ್ದರೆ ಸಾಕು ಎಂಬರ್ಥದಲ್ಲೂ ಆಗಬಹುದು. ಒಟ್ಟಿನಲ್ಲಿ ಮನುಷ್ಯನಿಗೆ ಸಹನೆ, ಮನೋದಾರ್ಢ್ಯ, ಅಂತಃಕರಣಶುದ್ಧಿ ಇದ್ದಲ್ಲಿ ದಾಸರ ಈ ಮಾತುಗಳು ಅರ್ಥವಾದೀತು. ಕೆಲವೊಮ್ಮೆ ಎಂತಹ ದ್ವೇಷಿಯೂ (ಉತ್ತಮ ಚೇತನನಾದಲ್ಲಿ) ಈ ನಡೆತೆಗೆ ಪರಿವರ್ತನೆ ಹೊಂದಬಹುದು. ಇಂತಹ ಜನ್ಮ ಬಂದಾಗ, ಇಂತಹ ಪರಂಪರೆಯ ಅನುಗ್ರಹ ಸಿಕ್ಕಾಗ, ನಾವು ನಮ್ಮ ಸಾಧನೆಗೆ ಒತ್ತುಕೊಟ್ಟು ಮಿಕ್ಕದ್ದನ್ನು ಗೌಣವಾಗಿಸಿ, ಎಲ್ಲರಿಗೂ ಸ್ಪಂದಿಸುತ್ತಾ ಬಾಳಿ ಉದ್ದಾರವಾಗಲು ದಾಸರು ಸುಲಭೋಪಾಯಗಳನ್ನು ನಮ್ಮ ಮುಂದಿಟ್ಟಿರುವರು.

**ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು**

**ಬಂಧನದೊಳಿಟ್ಟವರ ಬೆರೆಯಬೇಕು ।**

**ಕೊಂದವೈರಿಯ ಮನೆಗೆ ನಡೆದು ಹೋಗಲಿಬೇಕು**

**ಕುಂದೆಣಿಸುತವರ ಗೆಳೆತನ ಮಾಡಬೇಕು** ॥ 2 ॥

ದಾಸರು ಇನ್ನು ಕೆಲ ಪ್ರಸಂಗಗಳನ್ನು ಉದಾಹರಿಸಿ, ಮನುಷ್ಯ ಜೀವನವನ್ನು ಸಾಗಿಸಲು, ತನ್ನ ಸಾಧನೆಗಳನ್ನು ಪೂರೈಸುಕೊಳ್ಳಲು ಹೇಗೆ ನಡೆದು ಸಾಗಬೇಕೆಂಬುದನ್ನು ತಿಳಿಸುವರು. ಇವರೆ 'ನಿಂದಕರಿರಬೇಕು' ಎಂದು ಹೇಳಿದರು. ಅದರಂತೆ ನಮ್ಮನ್ನು ತೆಗಳುವವನು, ದೋಷಾರೋಪಣೆ ಮಾಡಿ ಹಿಗ್ಗುವವನು, ಹಿಂದೆ ಆಡಿಕೊಂಡು ಕೀಳಾಗಿ ಕಾಣುವವನನ್ನು ವಂದಿಸುತಲಿರಬೇಕು ಎಂದರು. ಇಲ್ಲವಾದಲ್ಲಿ ಮತ್ತಷ್ಟು ಮಿಥ್ಯಾರೋಪ ಮಾಡುತ್ತ ನಮ್ಮ ಸಾಧನೆಗೆ ಕಂಟಕನಾಗಬಹುದು. ನಮ್ಮನ್ನೇ ಬಂಧನದಲ್ಲಿ ಸಿಕ್ಕಿ ಹಾಕುವವನನ್ನು, ಇಕ್ಕಟ್ಟಿನಲ್ಲಿ ಸಿಗಿಸಿ ಸಂತಸಪಡುವವನನ್ನೂ ಸಹ ಆಗಾಗ ಕಲೆತು ಯೋಗಕ್ಷೇಮ ವಿಚಾರಿಸುತ್ತಿರಿ ಎನ್ನುವರು. ನಮ್ಮನ್ನು ಕೊಂದ ಅಂದರೆ ಮಾನ ಕಳೆದ, ಹೀನಾಯ ಸ್ಥಿತಿಗೆ ತಂದವರ ಮನೆಬಾಗಿಲಿಗೂ ಹೋದರೂ ಪರವಾಗಿಲ್ಲ ಎನ್ನುವರು, ಹೋಗುತ್ತಲಿರಿ ಎಂದರು. ನಮ್ಮನ್ನು ಕ್ಷೀಣಿಸುವಂತಾಗಿಸಿದವನ ಅಥವಾ ಕೀಳಾಗಿಸಿದವರೊಂದಿಗೆ ಗೆಳೆತನ ಮಾಡಬೇಕೆಂದರು. ದಾಸರು ಇಲ್ಲಿ ತಿಳಿಸಿದ ಮಾತುಗಳನ್ನು ಅನುಸರಿಸುವುದು, ಪಾಲಿಸುವುದು ಅಷ್ಟು ಸುಲಭಸಾಧ್ಯವಲ್ಲ. ಆದರೂ ಮನಸ್ಸಿನಲ್ಲಿ ಈ ಚಿಂತನೆಗಳ ಬಂದಲ್ಲಿ – ಇದ್ದಲ್ಲಿ ಸುಖಬಾಳುವೆಯನ್ನು ಸಾಗಿಸಬಹುದು. ಹಿಂದೆ ಹೇಳಿದಂತ ನಮ್ಮ ಸಾಧನೆಗಳನ್ನು ಪೂರೈಸಲು ಉದ್ಧಾರದ ಮಾರ್ಗವನ್ನು ಹಿಡಿಯಲು ಬಹಳಷ್ಟು ಸಹಕಾರಿ ಆಗುವಲ್ಲಿ ಸಂಶಯವಿಲ್ಲ.

**ಕೊಂಡೊಯ್ದು ಬಡಿಯುವರ ಕೊಂಡಾಡುತ್ತಿರಬೇಕು**
**ಕಂಡು ಸಹಿಸದವರ ಕರೆಯಬೇಕು**
**ಪುಂಡರೀಕಾಕ್ಷ ಶ್ರೀಪುರಂದರವಿಠಲನ**
**ಕೊಂಡಾಡಿ ತಾ ಧನ್ಯನಾಗಬೇಕು** ॥ 4 ॥

ಹೀಗೆ ಮುಂದುವರೆಸಿದ ದಾಸರು ನಮ್ಮನ್ನು ಸ್ಥಳ–ಪರಸ್ಥಳಗಳಲ್ಲಿ ಹಿಂಸಿಸುವವರನ್ನು ಹಾಡಿ ಹೊಗಳುತ್ತಿರಬೇಕೆಂದರು. ಹೀಗಿದ್ದಲ್ಲಿ ಅವರು ಕಡಿಮೆಯನ್ನಾದರೂ ಮಾಡುವರು ನಮ್ಮ ಏಳಿಗೆಯನ್ನು ಅಥವಾ ಜ್ಞಾನ–ಸಂಪತ್ತಾದಿಗಳನ್ನು ಕಂಡು ಸಹಿಸದವರನ್ನು ಮನೆಗೆ–ಪ್ರಸಂಗಗಳಿಗೆ ಕರೆಯುತ್ತಿರಿ ಎಂದರು.

ಶ್ರೀಪುರಂದರದಾಸರು 'ಸಾಧನ ಶರೀರವಿದು ನೀ ದಯದಿ ಕೊಟ್ಟದ್ದು ಸಾಧಾರಣವಲ್ಲ' ಎಂದದ್ದು 'ಮಾನವ ಜನುಮ ದೊಡ್ಡದು ಇದ ಹಾನಿ ಮಾಡಲಿ ಬೇಡಿ', 'ಈಸಬೇಕು ಇದ್ದು ಜಯಿಸಬೇಕು', 'ಇರಬೇಕು ಇಲ್ಲದಿರಬೇಕು' 'ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ' ಹೀಗೆ ಅನೇಕ ಸದುಕ್ತಿಗಳನ್ನು ಬರೆದು ಹಾಡಿ–ಹರಸಿದರು. ಇವುಗಳ ಆಂತರ್ಯ ತಿಳಿದಾಗ ಭಗವಂತನ ಮಾತು 'ನ ಮೇ ಭಕ್ತಃ ಪ್ರಣಸ್ಯತಿ' ನೆನಪಾಗುತ್ತದೆ.

ಹೀಗಿರಲು ದಾಸರು ಮೂರು ಪದ್ಯಗಳಲ್ಲಿ ತಿಳಿಸಿದ ಪ್ರಸಂಗಗಳು ಮನುಷ್ಯನ ನಿರ್ಲಿಪ್ತ ಸ್ಥಿತಿ, ಸಹನಶೀಲತೆ, ಮನಸ್ಥೈರ್ಯಾದಿಗಳ ಅಗಾಧತೆಯನ್ನು ಎತ್ತಿ ತೋರುತ್ತದೆ. ಇದು ಭಾಗವತ ಧರ್ಮಗಳನ್ನು ಅನುಷ್ಠಾನ ತಂದುಕೊಂಡವರಲ್ಲಿ ಕಾಣಲು ಸಾಧ್ಯ.

ದಾಸರು ಎಲ್ಲಕ್ಕೂ ಭೂಷಣ ಪ್ರಾಯವಾಗಿ ಕಡೆಗೆ ಹೇಳಿದ ಮಾತು **'ಶ್ರೀಪುರಂದರ ವಿಠಲನ ಕೊಂಡಾಡಿ ತಾ ಧನ್ಯನಾಗಬೇಕು'** । ಎಂದು. ಸದಾಕಾಲ ಶ್ರೀಹರಿಯ ಶ್ರವಣ ಮನನಾದಿಗಳೆಂಬ ಭಕ್ತಿ ಪ್ರಕಾರಗಳ ಅನುಷ್ಠಾನರತನಾಗಿ, ಸತ್ಕರ್ಮಾನುಷ್ಠಾನವೆಂಬ ಹರಿದಾಸ ವ್ರತನಾಗಿ, ಹರಿ–ಗುರುಭಕ್ತಿ ಭರಿತನಾಗಿ ಹಾಗೂ ಅವರ ಅನುಗ್ರಹಾಕಾಂಕ್ಷಿಯಾಗಿ ಇದ್ದಲ್ಲಿ ಯಾವ ಭಯವೂ ಇರದು. ದಾಸರು ಮೇಲೆ ತಿಳಿಸಿದ ಕಾರ್ಯ ತಂತ್ರದ ಅನುಸರಣೆಯು ಯಾವ ತಾಪಗಳಿಗೂ ಎಣೆಗೊಡದೆ ಸಾಧನೆಗೆ ಪೂರಕವಾಗಿ ಸುಖಬಾಳುವೆ ಕಾಣಲು ಕಾರಣವಾಗುತ್ತದೆ.

## ಶ್ರೀ ಕೃಷ್ಣಾರ್ಪಣಮಸ್ತು